**ಕರ್ನಾಟಕ ಸರ್ಕಾರ**

ಆಯುಕ್ತರ ಕಚೇರಿ,
ಭೂಮಾಪನ, ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ
ಕೆ.ಆರ್.ವೃತ್ತ, ಬೆಂಗಳೂರು-560 001,
ದೂರವಾಣಿ: 91-080-22212408
ಫ್ಯಾಕ್ಸ್: 91-080-22277528

ಸಂಖ್ಯೆ: ಸಿಬ್ಬಂದಿ.ಭೂಮಾಪಕರ.ನೇಮಕ.164/2010-11. ದಿನಾಂಕ: 20.11.2012.

ಅಡಕ : ಸಾಫ್ಟ್ ಕಾಪಿ

ನಿರ್ದೇಶಕರು,
ರಾಷ್ಟ್ರೀಯ ಮಾಹಿತಿ ಕೇಂದ್ರ,
ವಿಶ್ವೇಶ್ವರಯ್ಯ ಸಣ್ಣ ಗೋಪುರ,
ಬೆಂಗಳೂರು.

ಮಾನ್ಯರೆ,

**ವಿಷಯ:** 1834 ಭೂಮಾಪಕರ ಹುದ್ದೆಗೆ ಮೆರಿಟ್ ಲಿಸ್ಟ್‌ನ್ನು ಪ್ರಕಟಿಸುವ ಕುರಿತು.

**ಉಲ್ಲೇಖ :** ಈ ಕಛೇರಿಯ ಅಧಿಸೂಚನೆ ಸಂಖ್ಯೆ : ಸಿಬ್ಬಂದಿ.ನೇಮಕಾತಿ.164/2011-12 ದಿನಾಂಕ : 25.06.2011.

***

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ ನಮೂದಿಸಿರುವ ಈ ಕಛೇರಿಯ ಅಧಿಸೂಚನೆ ದಿನಾಂಕ : 25.6.2011 ರಲ್ಲಿ 1834 ಭೂಮಾಪಕರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲು ತಮ್ಮ ಸಂಸ್ಥೆ ವತಿಯಿಂದ ತಂತ್ರಾಂಶವನ್ನು ಸಿದ್ದಪಡಿಸಿಕೊಟ್ಟಿದ್ದು, ಅದರಂತೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ತದನಂತರ ಭೂಮಾಪಕರ ಹುದ್ದೆಗೆ ನಿಗದಿಪಡಿಸಲಾಗಿರುವಂತೆ ಸ್ಪರ್ಧಾತ್ಮಕ ಪರೀಕ್ಷೆಗಳಾದ (1) ಪತ್ರಿಕೆ-1 (ಸಾಮಾನ್ಯ ಪತ್ರಿಕೆ) (2) ಪತ್ರಿಕೆ-2 (ನಿರ್ದಿಷ್ಟ ಪತ್ರಿಕೆ) ಮತ್ತು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಗಳನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಸಹಭಾಗಿತ್ವದಲ್ಲಿ ನಡೆಸಲಾಗಿರುತ್ತದೆ.

ಸದರಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಿಗೆ ಸಂಬಂಧಿಸಿದಂತೆ (1) ಅಂತಿಮ ಕೀ ಉತ್ತರಗಳನ್ನು (4 ಶ್ರೇಣಿಗಳಲ್ಲಿ) (2) ಕನ್ನಡ ಕಡ್ಡಾಯ ಭಾಷಾ ಪರೀಕ್ಷೆಯ ಫಲಿತಾಂಶ (3) ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳನ್ನು ಆಧರಿಸಿ, ಮೆರಿಟ್ ಪಟ್ಟಿಯನ್ನು (4) ತಾತ್ಕಾಲಿಕ ಆಯ್ಕೆ ಪಟ್ಟಿ ಹಾಗೂ (5) ಪರೀಕ್ಷ ಫಲಿತಾಂಶ ತಡೆಹಿಡಿದಿರುವ ಬಗ್ಗೆ ಪಟ್ಟಿಗಳನ್ನು ಇಲಾಖೆಯ ವೆಬ್ ಸೈಟಿನಲ್ಲಿ http://sslr.kar.nic.in ನಲ್ಲಿ ಕೂಡಲೇ ಪ್ರಚುರಪಡಿಸಲು ಕೋರಿದೆ.

ತಮ್ಮ ವಿಶ್ವಾಸಿ,

ಅಧ್ಯಕ್ಷರು,
ನೇಮಕಾತಿ ಸಮಿತಿ ಮತ್ತು ಆಯುಕ್ತರು
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

RD-2/EST-33
A